ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ 9ನೇ ನವೆಂಬರ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ಎಂ.ವಿ. ವೆಂಕಟಪ್ಪ)** ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಡಾ॥ ರಾಜಕುಮಾರ್ ಅಪಹರಣ ಕುರಿತು

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಅಧ್ಯಕ್ಷರೇ ನಿನ್ನೆ ದಿವಸ ಪ್ರಶ್ನೋತ್ತರಕ್ಕೆ ಮುಂಚೆ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ತಾವೂ ಸಹ ನಮಗೆ ಭರವಸೆ ಕೊಟ್ಟಿರಿ. ಸಂಜೆ 6 ಗಂಟೆ ಒಳಗಡೆ ಮುಖ್ಯಮಂತ್ರಿಗಳು ಬರುತ್ತಾರೆ, ಈಗ ಅವರ ಆರೋಗ್ಯ ಚೆನ್ನಾಗಿಲ್ಲ. ವಿಶ್ವಬ್ಯಾಂಕ್ ಅಧ್ಯಕ್ಷರು ಬಂದಿದ್ದಾರೆ ಅದಕ್ಕಾಗಿ ಅವರು ಬಿಜಿ ಆಗಿದ್ದಾರೆಂದು ಹೇಳಿದ್ದಿರಿ. ಆದರೆ ಸಂಜೆ 6-30ರವರೆಗೂ ಮುಖ್ಯಮಂತ್ರಿಗಳಿಂದಾಗಲೀ ಸರ್ಕಾರದಿಂದಾಗಲೀ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಎರಡು ಬಹಳ ಮುಖ್ಯ ವಿಚಾರಗಳಿವೆ. ಒಂದು, ಸರ್ವಪಕ್ಷಗಳ ಮುಖಂಡರ ಸಭೆಯನ್ನು ಡಾ॥ ರಾಜಕುಮಾರರ ಅಪಹರಣದ ಹಿನ್ನೆಲೆಯಲ್ಲಿ ಒಂದೆರಡು ದಿನಗಳಲ್ಲಿ ಕರೆಯುವುದಾಗಿ ಸಭಾನಾಯಕರು ಹೇಳಿದ್ದರು. ಇದುವರೆಗೂ ತಾರೀಖು ಸಮಯ ನಿಗದಿ ಆಗಿರುವುದು ನಮಗೆ ಗೊತ್ತಿಲ್ಲ. ಎರಡನೆಯದಾಗಿ, ಸರ್ಕಾರ ಎಲ್ಲಿ ಎಡವಿದೆ ಎಂಬುದು. ಗೃಹಮಂತ್ರಿಗಳೇನೋ ಹೇಳುತ್ತಿದ್ದಾರೆ : ನಾವು ಚರ್ಚೆಗೆ ತಯಾರಾಗಿದ್ದೇವೆ ಎಂದು. ಹಾಗಿದ್ದರೆ, ದಿನಾಂಕ ಮತ್ತು ಟೈಮನ್ನು ಫಿಕ್ಸ್ ಮಾಡಬೇಕಾಗಿತ್ತು. ಈಗಾಗಲೇ ನಾವೂ ರೂಲ್ 69 ಕೆಳಗೆ ಒಂದು ವಿಸ್ತಾರವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿದ್ದೇವೆ. ವಿರೋಧ ಪಕ್ಷದ ನಾಯಕರು ಈ ಬಗ್ಗೆ ನಿಲುವಳಿ ಸೂಚನೆ ಸಹ ಕಳಿಸಿದ್ದರು. ದಯವಿಟ್ಟು ತಾವು ಚರ್ಚೆಗೆ ಅವಕಾಶ ಮಾಡಿ ಕೊಡಬೇಕು. ಇವತ್ತು ಗೃಹಸಚಿವರು ಮುಖ್ಯಮಂತ್ರಿಗಳ ಜೊತೆ ಸೇರಿ ಒಂದು ಹೇಳಿಕೆ ಮಾಡಬೇಕು, ಯಾವಾಗ ಸರ್ವಪಕ್ಷಗಳ ಸಭೆ ಕರೆಯುತ್ತೀರಾ ಮತ್ತು ಇಲ್ಲಿ ಚರ್ಚೆ ಯಾವತ್ತು ಎನ್ನುವುದು ಗೊತ್ತಾಗಬೇಕು. ಇವತ್ತು, ಯಾವರೀತಿ ಕ್ರೈಸಿಸ್ ಡೀಪನ್ ಆಗುತ್ತಿದೆ ಎಂದರೆ, ನಿನ್ನೆ ಡಾ!!ರಾಜ್‌ರವರ ಮಕ್ಕಳು ತಮಿಳುನಾಡಿಗೆ ಹೋಗಿ ನೆಡುಮಾರನನ್ನು ಭೇಟಿ ಮಾಡಿದ್ದಾರೆ. ಅಪ್ರತ್ಯಕ್ಷವಾಗಿ, ಗೋಪಾಲ್ ಜೊತೆಯಲ್ಲಿ ನೆಡುಮಾರನ್ ಸಹ ಎರಡೂ ರಾಜ್ಯಗಳ ಪ್ರತಿನಿಧಿ ಎಂದು ನಾವು ಒಪ್ಪಿಕೊಂಡಿದ್ದೇವೆ. ಮೌನವೇ ಸಮ್ಮತಿ. ಅವರು ಹೋದಾಗ ತಾವೇನು ಹೋಗುವುದು ಬೇಡವೆಂದು ನಾವೇನು ನೆಡುಮಾರನ್‌ಗೆ ಹೇಳಿರಲಿಲ್ಲ. ಆ ಪ್ರಕಾರ ಕರ್ನಾಟಕ ತಮಿಳುನಾಡುಗಳ

ರಾಯಭಾರಿಯಾಗಿ ನೆಡುಮಾರನ್ ಹೋಗಿ ಮಾತುಕತೆ ಮಾಡಿ ಬಂದಿರುವುದು ನಿಜ. ರಾಜ್ ಕುಮಾರ್ ಅವರ ಮಕ್ಕಳೂ ಸಹ ನೆಡುಮಾರನ್ ಅವರನ್ನು ಕೇಳಿದ್ದಾರೆ. ತಮಿಳುನಾಡಿನ ಕೆಲವು ವಿರೋಧ ಪಕ್ಷದ ಮುಖಂಡರುಗಳು ನೆಡುಮಾರನ್ ಅವರನ್ನು ಟೀಕೆ ಮಾಡಿದರು ಎಂಬ ದೃಷ್ಟಿಯಿಂದ ನಾನು ಹೋಗುವುದಿಲ್ಲ ಎಂದು ಕುಳಿತಿದ್ದಾರೆ. ನೆಡುಮಾರನ್ ಅವರ ಜೊತೆಯಲ್ಲಿ ತಾವು ಇನ್‌ಡೈರೆಕ್ಟಾಗಿ ಏನಾದರೂ ಮಾತುಕತೆಗಳನ್ನು ಮಾಡಲಿಕ್ಕೆ ಮತ್ತೆ ರಾಯಭಾರಿಯನ್ನಾಗಿ ಕಳುಹಿಸಲಿಕ್ಕೆ ಮಾತುಕತೆಗಳನ್ನು ಮಾಡಿದ್ದೀರಾ ಎಂಬುದು ಈ ಸದನಕ್ಕೆ ಗೊತ್ತಾಗಬೇಕು ಎನ್ನುವುದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ ಕೇಂದ್ರ ಸರ್ಕಾರದ ಮಂತ್ರಿಗಳಾಗಿರತಕ್ಕಂಥ ನಮ್ಮ ರಾಜ್ಯದಿಂದಲೇ ಗೆದ್ದು ಹೋಗಿರತಕ್ಕಂಥ ಶ್ರೀಮಾನ್ ವೆಂಕಯ್ಯ ನಾಯ್ಡು ಅವರು ಒಂದು ಹೇಳಿಕೆಯನ್ನು ಚೆನ್ನೈಯಲ್ಲಿ ನಿನ್ನೆ ಮಾಡಿದ್ದಾರೆ. ಈಗ ಕೇಂದ್ರ ಸರ್ಕಾರದ ಮಂತ್ರಿಗಳು, ಅದರಲ್ಲೂ ಅವರು ಸೀನಿಯರ್ ಮಿನಿಸ್ಟರ್ ಆಗಿದ್ದಾರೆ, ಶ್ರೀ ವೆಂಕಯ್ಯ ನಾಯ್ಡು ಅವರು. ಅವರು ನಮ್ಮ ರಾಜ್ಯದವರೇ. ನಾನು ಭಾವಿಸಿಕೊಂಡಿದ್ದೇನೆ, ನಮ್ಮ ರಾಜ್ಯದ ಹಿತದೃಷ್ಟಿಯಿಂದಾಗಿ ಎರಡೂ ರಾಜ್ಯ ಸರ್ಕಾರಗಳೂ ಸಹ ಕೇಂದ್ರ ಸರ್ಕಾರಕ್ಕೆ ಬರೆಯಬೇಕು. ನಿಮ್ಮ ಸ್ಟ್ಯಾಟಜಿಯನ್ನು ಛೇಂಜ್ ಮಾಡಬೇಕು. ಸ್ಟ್ಯಾಟಜಿ ಛೇಂಜ್ ಮಾಡತಕ್ಕಂಥ ಒಂದು ಸಕಾಲ ಬಂದಿದೆ ಎನ್ನತಕ್ಕ ಮಾತನ್ನು ಅವರೂ ಸಹ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ. ನಾವು ಈಗ ಸ್ಟ್ಯಾಟಜಿಯನ್ನು ಬದಲು ಮಾಡತಕ್ಕ ಸಂದರ್ಭ ಬಂದಿದೆ, ನಾವು ಮಾಡಿದ್ದೇವೆ. ಎನ್ನತಕ್ಕದ್ದನ್ನು ತಾವು ಹೇಳಬೇಕಾಗುತ್ತದೆ. ಈ ಮಧ್ಯದಲ್ಲಿ ಏನಾಗಿದೆ ಎಂದರೆ ಅವರದ್ದೇ ಆದ ಸಮಸ್ಯೆಗಳು ಹುಟ್ಟಿಕೊಂಡಿವೆ. ಶ್ರೀ ಮುರಸೋಳಿ ಮಾರನ್ ಅವರ ಆರೋಗ್ಯ ಚೆನ್ನಾಗಿಲ್ಲ. ಅವರಿಗೆ ರಾಜಕೀಯ ಸಮಸ್ಯೆಗಳು ಇವೆ.

ಅಧ್ಯಕ್ಷರು : ನಾನು ಪರ್ಮಿಷನ್ ಕೊಟ್ಟ ಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ದಯವಿಟ್ಟು ಹೇಳಿ. ನಾವು ಪ್ರೊಸೀಜರಲ್ ರ್‍ಯಾಂಗಲ್ಸ್‌ಗೆ ನಾವು ಹೋಗುವುದು ಬೇಡ.

ಅಧ್ಯಕ್ಷರು : ನೀವು ಏನೇನು ಮಾತನಾಡಬೇಕೋ ಅವೆಲ್ಲವನ್ನೂ ಈಗಲೇ ಪ್ರಾರಂಭ ಮಾಡಿದ್ದೀರಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ರಾಜ್‌ಕುಮಾರ್ ಅವರು ಆರೋಗ್ಯವಾಗಿದ್ದಾರಾ? ನಿಮಗೆ ಬಂದಿರತಕ್ಕಂಥ ಸ್ಥಿತಿಗಳು ಏನು? ಅವರ ಆರೋಗ್ಯದ ಬಗ್ಗೆ ನಾವು ಆತಂಕಪಡದೇ ಇನ್ಯಾರು ಪಡಬೇಕು. ಇದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಸದನದಲ್ಲಿ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬರುವವರು ಇದ್ದಾರೆ. ಇದರ ಬಗ್ಗೆ ಸರ್ಕಾರ ಹೇಳಿಕೆಯನ್ನು ಕೊಡಬೇಕಾಗುತ್ತದೆ. ಸರ್ಕಾರ ಹೇಳಿಕೆ ಕೊಡದೇ ಹೋದರೆ ನಾವು ಯಾವಾಗ ಇದನ್ನು ತಿಳಿದುಕೊಳ್ಳುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪ್ರಶ್ನೋತ್ತರ ವೇಳೆ ಮುಗಿಯಲಿ. ಅವರೇನಾದರೂ ಇದರ ಬಗ್ಗೆ ಕೇಳಬೇಕು ಎಂದರೆ, ಅನಂತರ ಕೇಳಲಿ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿದನಂತರ ಕೇಳಬೇಕು. ನೀವೆ ಎದ್ದು ನಿಂತು ಹೀಗೆ ಕೇಳಿದರೆ

ಹೇಗೆ? ರೂಲ್ಸನ್ನು ನೀವೇ ವಯಲೇಟ್ ಮಾಡುತ್ತಿದ್ದರೆ ಹೇಗೆ? ನಿಮ್ಮ ಇಷ್ಟ ನಾನೇನೂ ಹೇಳುವುದಿಲ್ಲ. ಪ್ರಶ್ನೋತ್ತರದ ನಂತರ ವಿಷಯವನ್ನು ರೈಸ್ ಮಾಡಬಹುದಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನಿಮ್ಮ ಕೊಠಡಿಗೆ ಬಂದು ಹೇಳಿದ್ದೇನೆ.

ಅಧ್ಯಕ್ಷರು : ನೀವು ಹೇಳಿದ್ದೀರಿ, ಲೆಟರ್ ಸಹ ಬರೆದು ಕೊಟ್ಟಿದ್ದೀರಿ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಈಗ ಪ್ರಶ್ನೋತ್ತರ ಆದ ಮೇಲೆಯೇ ಮಾನ್ಯ ವಿರೋಧ ಪಕ್ಷದನಾಯಕರು ಮಾತನಾಡುತ್ತಾರೆ. ಅದಾದ ಮೇಲೆ ನೀವು ಉತ್ತರ ಕೊಡಿ. ನಮ್ಮದೇನೂ ತಕರಾರು ಇಲ್ಲ. ಒಂದು ಗಂಟೆಯಲ್ಲಿ ಏನೂ ಆಗುವುದಿಲ್ಲ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾ ಅವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರಲ್ಲ ಅದರ ಬಗ್ಗೆ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಾವು ಸರ್ವ ಪಕ್ಷದ ಮೀಟಿಂಗ್ ಕರೆಯುತ್ತೇವೆಂದು ಹೇಳಿದ್ದರು. ಇಲ್ಲಿ ನಿನ್ನೆ ಹಲವಾರು ಸದಸ್ಯರೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು. ಸೆಷನ್ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಸರ್ವಪಕ್ಷಗಳ ಮೀಟಿಂಗ್ ಕರೆಯಲಿ, ಮಾತನಾಡಲಿ, ಎಲ್ಲವೂ ನಡೆಯುತ್ತದೆ. ಆದರೆ ಸೆಷನ್ ನೆಡೆಯುವಂತಹ ಸಂದರ್ಭದಲ್ಲಿ ಸರ್ವಪಕ್ಷಗಳ ಸಭೆ ಕರೆಯಬೇಕು. ನಿನ್ನೆ ಮಾನ್ಯ ಗೃಹ ಮಂತ್ರಿಗಳು ಒಂದು ಸಂದರ್ಭದಲ್ಲಿ ಸಿಟ್ಟಾಗಿ ಹೇಳಿದರು. ಏನು ಪರ್ಯಾಯ ವ್ಯವಸ್ಥೆ ಆಗಿದೆ ಹೇಳಿ ಎಂದರು. ನಾವು ಚರ್ಚೆಗೆ ಅವಕಾಶ ಕೊಡಲು ತಯಾರಿದ್ದೇವೆಂದರು. ಹಾಗಾದರೆ ಚರ್ಚೆ ಮಾಡಲು ತಯಾರಾಗಿ. ಇವತ್ತು ಸರ್ವ ಪಕ್ಷಗಳ ಮೀಟಿಂಗ್ ಕರೆಯುತ್ತೇವೆ ಎಂದು ಹೇಳುತ್ತಾರೆ. ಮೊನ್ನೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದತಕ್ಷಣ ಒಂದು ಗಂಟೆಯೊಳಗೆ ಮೀಟಿಂಗ್ ಕರೆಯ ಬಹುದಿತ್ತು, ಸಾಯಂಕಾಲ ಕರೆಯಬಹುದಾಗಿತ್ತು. ಅದನ್ನು ಮಾಡಲಿಲ್ಲ. ಇದು ಅರ್ಜೆಂಟ್ಸಿ ಇರುವಂತಹದ್ದು ಸಬ್‌ಸಿಕ್ವೆಂಟಾಗಿ ಡೆವಲಪ್‌ಮೆಂಟ್ ಆಗುತ್ತಿದೆ. ಹೀಗಾಗಿ ಪ್ರತಿ ಒಂದು ಕ್ಷಣ ರಾಜ್ಯದಲ್ಲಿ ಆತಂಕದ ಕ್ಷಣದಲ್ಲಿ ಜನತೆ ಆವೇಗದಿಂದ ನೋಡುತ್ತಿದ್ದಾರೆ. ಏನಾಗುತ್ತದೆ? ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ? ಇದೇನು ಹೀಗೆಯೇ ಮುಂದುವರಿಯುವುದೋ ಹೇಗೆ ಎನ್ನುವಂತಹ ಒಂದು ವಾತಾವರಣ ನಿರ್ಮಾಣ ಆಗಿದೆ. ಅದಕ್ಕಾಗಿ ಇಲ್ಲಿ ಚರ್ಚೆಗಾದರೂ ಸದನದಲ್ಲಿ ಅವಕಾಶ ಕೊಡಿ ಬಹಳಷ್ಟು ಶಾಸಕರು ಇದರ ಬಗ್ಗೆ ಪ್ರಸ್ತಾಪ ಮಾಡಬೇಕು ಎಂದು ಇದ್ದಾರೆ. ಅದರ ಬಗ್ಗೆ ಆದರೂ ಚರ್ಚೆ ಆಗಲಿ. ನೀವು ರೂಲಿಂಗ್ ಕೊಟ್ಟಿದ್ದೀರಿ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಗುವ ತನಕ ಏನೂ ಮಾತನಾಡುವುದು ಬೇಡ ಎಂದು ಹೇಳಿದ್ದೀರಿ.

ಅಧ್ಯಕ್ಷರು : ಇವತ್ತಿನ ಅಜೆಂಡಾದಲ್ಲಿ ನಾವು ಇನ್‌ಕ್ಲೂಡ್ ಮಾಡಿದ್ದೇವಲ್ಲ. ಚರ್ಚೆಗೋಸ್ಕರವೇ ಅಜೆಂಡಾದಲ್ಲಿ ಇನ್‌ಕ್ಲೂಡ್ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಈ ಇಶ್ಯೂ ಡ್ರ್ಯಾಗಾನ್ ಆಗುತ್ತಾ ಹೋಗುತ್ತಿದೆ. ಇದರ ಬಗ್ಗೆ ಒಂದು ಸ್ಪಷ್ಟತೆ ಬೇಕು. ಸಾಯಂಕಾಲದೊಳಗೆ ಸ್ಟೇಟ್‌ಮೆಂಟ್ ಕೊಡುತ್ತೇವೆಂದರು. ಇದರ ಬಗ್ಗೆ

ಏನೂ ಆಗಲಿಲ್ಲ. ಸರ್ಕಾರದ ಕಡೆಯಿಂದ ಈ ವಿಷಯದ ಬಗ್ಗೆ ಇವತ್ತು ಕ್ಲಿಯಾರಿಟಿ ಬರುತ್ತಿಲ್ಲ. ನೀವು ಸರ್ವ ಪಕ್ಷದ ಮೀಟಿಂಗ್ ಎಂದು ಹೇಳಿದ್ದೀರಿ. ಇವತ್ತಿನವರೆಗೆ ಪರ್ಸನಲ್ ಆಗಿ ಕಮ್ಯುನಿಕೇಶನ್ ಆಗಿಲ್ಲ. ನಾವು ನೋಡುತ್ತಿದ್ದೇವೆ, ಸರ್ವ ಪಕ್ಷಗಳ ಸಭೆ ಇವತ್ತು ಕರೆಯುತ್ತಾರೆ. ನಾಳೆ ಕರೆಯುತ್ತಾರೆ ಎಂದು ಅಂದುಕೊಂಡಿದ್ದೇವೆ. ಟಿ.ವಿ.ಯಲ್ಲಿ ನೋಡುತ್ತಿದ್ದೇವೆ. ಆದರೆ ಇವತ್ತಿನವರೆಗೂ ಪ್ರತಿಪಕ್ಷದ ನಾಯಕನಾಗಿ ನನಗೆ ಕಮ್ಯುನಿಕೇಶನ್ ಇಲ್ಲ. ಬೇರೆ ನಾಯಕರಿಗೆ ಹೋಗಲಿ. ಇವತ್ತಿನವರೆಗೆ ಕಮ್ಯುನಿಕೇಶನ್ ಇಲ್ಲ. ಇದು ತತ್‌ಕ್ಷಣ ಆಗಬೇಕಾಗಿತ್ತು. ಅವತ್ತು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆದ ತಕ್ಷಣವೇ ಸರ್ವ ಪಕ್ಷಗಳ ಸಭೆ ಕರೆಯಬೇಕಾಗಿತ್ತು.

ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡಿಸೋಣ.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯ ಅವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿದಂತಹ ಪ್ರಶ್ನೆ ಏನು ಇದೆ ಆ ಒಂದು ಪ್ರಶ್ನೆಯನ್ನು ನಾವಿಲ್ಲಿ ಚರ್ಚೆ ಮಾಡಬೇಕೋ ಬಿಡಬೇಕೋ ಎನ್ನತಕ್ಕದ್ದರ ಬಗ್ಗೆ ಅದು ತಮಗೆ ಬಿಟ್ಟಿದ್ದು. ಏಕೆಂದರೆ ನಾನು ಅನೇಕ ಸಾರಿ ಹೇಳಿದ್ದೇನೆ. ಸರ್ಕಾರ ಚರ್ಚೆಗೆ ಸಿದ್ಧ ಇದೆ. ಆದರೆ ಈ ಮಧ್ಯೆ ನಾವು ಚರ್ಚೆ ಮಾಡಿದರೆ ಅದರ ಪರಿಣಾಮವನ್ನು ನೆಗೋಷಿಯೇಟ್ ಮಾಡತಕ್ಕವರ ಮೇಲೆ ಏನಾಗಬಹುದು? ಉದಾಹರಣೆಗೆ ತಮಿಳುನಾಡಿನ ವಿಚಾರ. ಅಸೆಂಬ್ಲಿಯಲ್ಲಿ ಈ ಮಾತುಗಳು ಬಂದ ಕಾರಣವೇ ಇವತ್ತು ಯಾರು ಆರ್.ಆರ್. ಗೋಪಾಲ್ ಅವರ ಜೊತೆಯಲ್ಲಿ ಹೋಗಿದ್ದರು ಆ ನೆಡುಮಾರನ್ ರವರು ಇವತ್ತು ಮುನಿಸಿಕೊಂಡು ಕುಳಿತಿದ್ದಾರೆ. ಅದಕ್ಕೆ ಇಂತಹ ಪರಿಣಾಮಗಳು ಆಗಬಾರದು ಎನ್ನತಕ್ಕ ದೃಷ್ಟಿಯಿಂದಲೇ ಒಮ್ಮತದಿಂದ ಎಲ್ಲರೂ ಒಪ್ಪಿಕೊಂಡು ಚರ್ಚೆ ಮಾಡತಕ್ಕದ್ದು ಸಧ್ಯಕ್ಕೆ ಸೂಕ್ತ ಅಲ್ಲ. ಅದೇನಾದರೂ ಪರಿಣಾಮ ಹೊರಗಡೆ ಬಂದ ಮೇಲೆ ಅಥವಾ ಅನಕ್ಕೆ ಧಕ್ಕೆ ಆಗದ ರೀತಿಯಲ್ಲಿ ಯಾವ ರೀತಿಯಲ್ಲಿ ಚರ್ಚೆ ಮಾಡಬೇಕು ಎನ್ನತಕ್ಕದ್ದನ್ನು ಯೋಚನೆ ಮಾಡಿ ಮಾಡೋಣ ಎಂಬ ಒಂದು ಅಭಿಪ್ರಾಯಕ್ಕೆ ನಾವು ಬಂದಿದ್ದೇವೆ. ಆದರೆ, ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ತಮ್ಮೆಲ್ಲರನ್ನೂ ಕನ್‌ಸಲ್ಟ್ ಮಾಡಿ ಮುಂದಿನ ಕ್ರಮವನ್ನು ಜರುಗಿಸುತ್ತೇವೆ ಎನ್ನತಕ್ಕದ್ದನ್ನು ಕೂಡ ಹೇಳಿದ್ದಾರೆ. ಅದಕ್ಕೆ ಅವರಿಗೆ ಸಮಯ ಇಲ್ಲ ಎನ್ನತಕ್ಕ ದೃಷ್ಟಿಯಿಂದ ಅಲ್ಲ. ನಮಗೆ ಸರ್ಟಿಫೈಡ್ ಕಾಪಿ ಬಂದಿರಲಿಲ್ಲ. ನಿನ್ನೆ ಸುಪ್ರೀಂ ಕೋರ್ಟ್‌ನಿಂದ ಸರ್ಟಿಫೈಡ್ ಕಾಪಿ ಬಂದಿದೆ. 40 ಪೇಜಿನ ಜಡ್ಜ್‌ಮೆಂಟಿನ ಕಾಪಿ ಇದೆ. ಅದನ್ನು ಮಾನ್ಯ ಸಂಸದೀಯ ಹಾಗೂ ಕಾನೂನು ಸಚಿವರಾದಂತಹ ಮಾನ್ಯ ಚಂದ್ರೇಗೌಡರ ಹತ್ತಿರ ಅಡ್ವೊಕೇಟ್ ಜನರಲ್ ಅವರು ತಂದಿದ್ದಾರೆ. ಈಗ ಅದನ್ನು ತಂದ ಮೇಲೆ ನಾಳೆ ಚರ್ಚೆ ಮಾಡಬಹುದು. ಅವರಿಗೆ ನಿನ್ನೆ ಮಧ್ಯಾಹ್ನದವರೆಗೆ ಹುಷಾರಿರಲಿಲ್ಲ. ಅವರು 12.00 ಗಂಟೆಗೆ ಹಾಜರು ಆದರು. ಬಂದಮೇಲೆ ತಮಗೆ ಗೊತ್ತಿದೆ. ಕಂಟಿನ್ಯುಯಸ್ ಆಗಿ ವಿಶ್ವ ಬ್ಯಾಂಕಿನ ಅಧಿಕಾರಿಗಳ ಜೊತೆ ಮಾತನಾಡುತ್ತಿದ್ದರು. ರಾಜ್ಯದ ಹಿತದೃಷ್ಟಿಯಿಂದ ಏನು ಕೆಲಸ ಮಾಡಬೇಕಾಗಿತ್ತೋ ಅದೆಲ್ಲವನ್ನೂ ಕೂಡ ಅವರು ಮಾಡಿಕೊಂಡೇ ಬಂದಿದ್ದಾರೆ. ಇದೂ ಕೂಡ ಅಷ್ಟೇ ಗಂಭೀರವಾದಂತಹದ್ದು, ಮಹತ್ವವಾದಂಥ ಕೆಲಸ ಇದನ್ನು ಕಡೆಗಣಿಸತಕ್ಕ ಪ್ರಶ್ನೆಯೇ ಇಲ್ಲ. ತಮಗೆ ಎಷ್ಟು ಆಸಕ್ತಿ ಇದೆಯೋ ನಮಗೂ ಕೂಡ ಅಷ್ಟೇ ಆಸಕ್ತಿ ಇದೆ. ಇದರಲ್ಲಿ ನಾವೆಲ್ಲರೂ ಕೂಡ ಒಗ್ಗಟ್ಟಾಗಿಯೇ ಇಲ್ಲಿಯವರೆಗೆ

ಇದ್ದೇವೆ. ಈ ಸಮಸ್ಯೆ ಬಗ್ಗೆ ನಾವು ಒಂದಾಗಿಯೇ ಮುಂದುವರೆದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನಾಳೆ ಸರ್ವ ಪಕ್ಷದ ಸಭೆ ಕರೆಯುತ್ತಾರೆ. ಅವರು ಇವತ್ತು ನಾಳೆ ಎಂದು ಹೇಳಿದ್ದಾರೆ. ಅದಕ್ಕೆ ನಾಳೆ ಕರೆಸುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಟೈಮ್ ಫಿಕ್ಸ್ ಮಾಡುತ್ತಾರೆ. ನಾಳೆ ತಮ್ಮನ್ನು ಕರೆಸಿ ಸಮಾಲೋಚನೆ ಮಾಡಿ ಯಾವ ರೀತಿಯಾಗಿ ಹೆಜ್ಜೆ ಇಡಬೇಕು? ಏನು ಮಾಡಬೇಕು? ಇದರ ಅಡಕು ತೊಡಕುಗಳು ಏನು ಇವೆ? ಮುಂದೆ ನಾವು ಎಷ್ಟರಮಟ್ಟಿಗೆ ಹೋಗಬಹುದು ಎನ್ನತಕ್ಕದ್ದರ ಬಗ್ಗೆ ತಾವು ಸಲಹೆ ಸೂಚನೆಗಳನ್ನು ಕೊಟ್ಟರೆ ಅದನ್ನು ಖಂಡಿತವಾಗಿ ಗಮನದಲ್ಲಿ ಇಟ್ಟುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಶೆಟ್ಟರ್ ಅವರಿಗೂ ಗೊತ್ತು. ತಮಗೂ ಗೊತ್ತು. ಮಾನ್ಯ ಸದಸ್ಯರಿಗೆಲ್ಲ ಗೊತ್ತು. ಮಾನ್ಯ ನಾಯುಡು ಅವರು ಮತ್ತು ಮಾನ್ಯ ಅನಂತ್ ಕುಮಾರ್ ಅವರು ಎಲ್ಲರೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಛೇಂಬರಿನಲ್ಲಿ ಭೇಟಿ ಆಗಿ ಮಾತುಕತೆಯನ್ನೂ ಆಡಿದ್ದಾರೆ. ಏನೇನು ಮಾತುಕತೆ ಆಗಿದೆ ಎನ್ನುವ ಬಗ್ಗೆ ಒಂದು ಹಂತದಲ್ಲಿ ನಾವು ಒಂದು ಹೇಳುವುದು, ಮತ್ತಬ್ಬರು ಮತ್ತೊಂದು ಹೇಳುವುದು ಅದು ಚೆನ್ನಾಗಿರುವುದಿಲ್ಲ ಅದಕ್ಕೆ ಅವರೇನು ಮಾತನಾಡಿದರು ಹಾಗೂ ಅವರೇನು ಒಪ್ಪಿದರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ತಾವೆಲ್ಲರೂ ಇಲ್ಲಿಯವರೆಗೆ ಸಹಕರಿಸಿದ್ದೀರಿ. ನಾವು ಅನುಸರಿಸಿರತಕ್ಕ ಮಾರ್ಗಕ್ಕೆ ಬೆಂಬಲವನ್ನು ಸೂಚಿಸಿದ್ದಾರೆ. ಅದಕ್ಕೆ ಪುನಃ ನಾವು ಏನಾದರೂ ಒಂದು ಅರ್ಥ ಕಲ್ಪಿಸಿ ಅವರು ಅಲ್ಲಿ ಹೀಗೆ ಹೇಳಿದರು, ಇಲ್ಲಿ ಹೀಗೆ ಹೇಳಿದರು ಎನ್ನತಕ್ಕ ಬಗ್ಗೆ ನಾವು ಈಗ ಹೇಳತಕ್ಕದ್ದು ಇಲ್ಲ. ನಾವು ನಡೆದಂತಹ ದಾರಿ, ನಾವು ಹಿಡಿದಂತಹ ಮಾರ್ಗ ಮತ್ತು ಏನು ನೆಗೋಷಿಯೇಷನ್ಸ್ ಮಾಡುತ್ತಿದ್ದೇವೆ. ಇದೇ ಒಳ್ಳೆಯದು ಎನ್ನತಕ್ಕ ಮಾತನ್ನು ಅವರು ಕೂಡ ಹೇಳಿ ಅಪ್ರಿಸಿಯೇಷನ್ ಮಾಡಿದ್ದಾರೆ. ಕೇಂದ್ರ ಸರ್ಕಾರ ಮಾಡಿದೆ. ಪಾರ್ಲಿಮೆಂಟ್ ಸದಸ್ಯರು ಮಾಡಿದ್ದಾರೆ. ತಾವೆಲ್ಲರೂ ಕೂಡ ಮಾಡಿದ್ದೀರಿ. ಇಂಟೆಲೆಕ್ಚುಯಲ್ಸ್ ಅಪ್ರಿಸಿಯೇಟ್ ಮಾಡಿದ್ದಾರೆ. ಇಷ್ಟೊಂದು ವಿಶ್ವಾಸಕ್ಕೆ ತೆಗೆದುಕೊಂಡು ಯಾವುದಾದರೂ ಒಂದು ಸಮಸ್ಯೆ ನಮ್ಮ ಇಡೀ ರಾಜ್ಯದಲ್ಲಿ ಅಲ್ಲ ದೇಶದಲ್ಲಿ ಇರತಕ್ಕದ್ದು ಸರ್ವಾನುಮತದಿಂದ ನಡೆದಂತಹದ್ದು ಎಂದರೆ ಇದೊಂದು ಸಮಸ್ಯೆ. ಅದಕ್ಕೆ ಹೇಳುತ್ತಿದ್ದೇನೆ. ನಿಮಗೇನಾದರೂ ವಿಷಯವನ್ನು ಮುಚ್ಚಿಟ್ಟು ಅಥವಾ ನಿಮ್ಮ ನೋಟೀಸಿಗೆ ತರದೇ ಹಿಂದೆ ಮಾಡತಕ್ಕದ್ದು ಏನೂ ಇಲ್ಲ. ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ರಾಜ್‌ಕುಮಾರ್ ಅವರ ಸುರಕ್ಷಿತ ಬಿಡುಗಡೆಗಾಗಿ ಏನು ಕ್ರಮಗಳನ್ನು ಜರುಗಿಸಬೇಕೋ ಖಂಡಿತವಾಗಿ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಸತತವಾಗಿ ಮಾನ್ಯ ಕರುಣಾನಿಧಿ ಅವರ ಜೊತೆ ಸಂಪರ್ಕದಲ್ಲಿದ್ದಾರೆ. ಮತ್ತು ರಾಜ್ ಕುಮಾರ್‌ರವರ ಆರೋಗ್ಯದ ಬಗ್ಗೆ ನಮಗೆ ಬಂದಂತಹ ಮಾಹಿತಿಯ ಪ್ರಕಾರ ಚೆನ್ನಾಗಿದೆ ಎಂದು ಗೊತ್ತಾಗಿದೆ. ನೆಡುಮಾರನ್, ಆರ್.ಆರ್. ಗೋಪಾಲ್ ಮತ್ತು ಸುಕುಮಾರನ್, ಕಲ್ಯಾಣಿ ಅವರು ಹೋಗತಕ್ಕದ್ದರ ಬಗ್ಗೆ ಕರುಣಾನಿಧಿ ಅವರು ಪ್ರಯತ್ನಮಾಡುತ್ತಿದ್ದಾರೆ. ಅವರಿಗೆ ಅದು ಬಿಟ್ಟಂತಹ ವಿಷಯ. ಏಕೆಂದರೆ ನಾವು ಅನೇಕ ಸಾರಿ ಹೇಳಿದ್ದೇವೆ. ಈ ಅಪಹರಣವು ತಮಿಳುನಾಡಿನಲ್ಲಿ ಆದಕಾರಣ, ಆ ಜ್ಯೂರಿಸ್‌ಡಿಕ್ಷನ್‌ನಲ್ಲಿ ಆದಕಾರಣ ಕರುಣಾನಿಧಿಯವರು ಒಂದು ಜವಾಬ್ದಾರಿಯನ್ನು ಹೊತ್ತುಕೊಂಡು ಬಹಳ ಸಂಯಮಯತೆಯಿಂದ ಮತ್ತು ಬಹಳ ಪೇಷನ್ಸ್‌ನಿಂದ ಕೆಲಸ ಮಾಡುತ್ತಿದ್ದಾರೆ. ಇದು ಸೂಕ್ಷ್ಮತೆ ದೃಷ್ಟಿಯಿಂದ, ಡೆಲಿಕೇಟ್ ಇದ್ದ ಕಾರಣ ನಾವು ಎಲ್ಲವನ್ನೂ ಬಹಿರಂಗ ಪಡಿಸುವುದಕ್ಕೆ ಆಗುವುದಿಲ್ಲವೆಂದು

ತಿಳಿದುಕೊಂಡೇ ಹಿಡಿದು ಹಿಡಿದು ಮಾತನಾಡುತ್ತಾ ಇದ್ದೇವೆ ಹೊರತಾಗಿ, ಬಾಕಿ ಯಾವುದೂ ಕೂಡ ಮುಚ್ಚುಮರೆ ಇರತಕ್ಕದ್ದು ಇಲ್ಲ ಅಥವಾ ನಾವು ಚರ್ಚೆಗೆ ಅಡ್ಡಿ ಬರಬೇಕು, ತೊಂದರೆ ಮಾಡಬೇಕು ಎನ್ನತಕ್ಕ ಇಚ್ಛೆಯೂ ಇಲ್ಲ. ಆದಕ್ಕಾಗಿ ಕೆಲವು ವಿಷಯಗಳು ತಮಗೂ ಕೂಡ ಗೊತ್ತಿದೆ. ಕೆಲವನ್ನು ನಾವು ಹೇಳಬಹುದು, ಕೆಲವನ್ನು ಸಮಸ್ಯೆ ಬಗೆಹರಿಯುವವರೆಗೆ ಬಹಿರಂಗಪಡಿಸುವುದಕ್ಕೆ ಆಗುವುದಿಲ್ಲ. ಅದೂ ಕೂಡ ತಮಗೆ ಗೊತ್ತಿದೆ. ಆದಕ್ಕಾಗಿ ತಾವು ಇಷ್ಟಕ್ಕೇ ಬಿಟ್ಟರೆ ಒಳ್ಳೆಯದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನೋಡಿ ನಾವು ಇದನ್ನು ಕೇಳಿದ್ದರಿಂದ ಇಡೀ ರಾಜ್ಯದ ಜನತೆಗೆ ಎರಡು ವಿಚಾರ ಗೊತ್ತಾಯಿತು. ಒಂದು ಗೃಹ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಮಾಹಿತಿ ಬಂದಿದೆ ಅದು ಡಾ||ರಾಜ್‌ಕುಮಾರ್ ಅವರ ಆರೋಗ್ಯ ಚೆನ್ನಾಗಿದೆ. ಇದು ಮೊದಲನೆಯದು. ಎರಡನೆಯದಾಗಿ ಸುಪ್ರೀಂ ಕೋರ್ಟಿನ ಆರ್ಡರ್ ಕಾಪಿ ಇವರಿಗೆ ತಲುಪಿದೆ. ಇದೆಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಹಾಗಾದರೆ ಕೇಂದ್ರ ಸರ್ಕಾರದ ಮಂತ್ರಿಗಳಾದ ಮಾನ್ಯ ವೆಂಕಯ್ಯನಾಯುಡು ಅವರು ಹೇಳಿಕೆ ಕೊಟ್ಟಿದ್ದಾರೆ. ನಿಮಗೆ ಪತ್ರ ಬರೆದಿದ್ದಾರಾ? ನಮಗೆ ಹೇಗೆ ಗೊತ್ತಾಗಬೇಕು? ಟೆಲಿಗ್ರಾಂ ಕೊಟ್ಟಿದ್ದಾರಾ? ಅಥವಾ ಬರೇ ಪತ್ರಿಕಾ ಹೇಳಿಕೆ ಕೊಟ್ಟಿದ್ದಾರಾ?

ಅಧ್ಯಕ್ಷರು : ನೀವು ನಾಳೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾಳೆ ಅಲ್ಲ ಸ್ವಾಮಿ, ಇವತ್ತು ನಮಗೆ ಬೇಕಾಗಿರುವುದು. ನಮಗೆ ಮಾತ್ರ ನೀವು ಹೇಳುತ್ತೀರಿ. ಈ ಸದನದ ಹೊರಗಡೆ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿ ಆಗಿದ್ದಂತಹ ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರ ಸರ್ಕಾರ ಇದ್ದಾಗ ಆಯಿತು. ಆದಾದ ಮೇಲೆ ಏನೋ ಹೆಚ್ಚು ಕಡಿಮೆ ಆಯಿತು ಎಂದು ಹೇಳಿದ್ದಾರೆ.

ಅಧ್ಯಕ್ಷರು : ವಿಷಯ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇಲ್ಲಿ ಪಾಲಿಟಿಕ್ಸ್ ಮಿಕ್ಸ್ ಮಾಡಿ ಮಾತನಾಡುತ್ತಿಲ್ಲ.

ಅಧ್ಯಕ್ಷರು : ನಾವು ವಿಷಯ ಪ್ರಸ್ತಾಪ ಮಾಡಲು ಸ್ವಲ್ಪ ಅಲೋ ಮಾಡಿದ್ದಕ್ಕೆ ಹೀಗೆ ಆಗುತ್ತಿದೆ, ಕ್ಷಮಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯ ಅವರೇ ತಮಗೂ ಗೊತ್ತು. ಸುಪ್ರೀಂ ಕೋರ್ಟ್‌ನವರು ಸಾರಾಸಗಟಾಗಿ ಹದಿನೈದು ವರ್ಷದ ಸರ್ಕಾರಗಳನ್ನು ತೆಗೆಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನು ನೋಡೋಣ. ಸುಪ್ರೀಂ ಕೋರ್ಟ್‌ನವರು ಏನೇನು ಹೇಳಿದ್ದಾರೆ, ಸುಪ್ರೀಂ ಕೋರ್ಟ್‌ನವರು ಸಾರಾಸಗಟಾಗಿ ನೀವು ಅಫಿಡವಿಟ್ ಮಾಡುವಾಗ ಏನೇನು ಮಾಡಿದ್ದೀರಿ? ಮೈಸೂರು ಟಾಡಾ ಕೋರ್ಟ್‌ನಲ್ಲಿ ಏನಾಯಿತು ಅವೆಲ್ಲಾ ಏನೇನು ಆಯಿತು ನೋಡೋಣ. ಯಾವ್ಯಾವ ಜಡ್ಜ್‌ಮೆಂಟ್ ಕಾಪಿಗಳನ್ನು ಕಳಿಸಿದ ಮೇಲೆ ನಿಮ್ಮ ಕೈಯಲ್ಲಿ ವಿಷಯ ಇದೆ, ನಮ್ಮ ಕೈಯಲ್ಲೂ ಇದೆ, ಅದನ್ನು ಹೇಳೋಣ, ನನಗೆ ಬೇಕಾಗಿರತಕ್ಕದ್ದು ಈಗ ಏನು? ವಿರೋಧ ಪಕ್ಷದ

ಸಹಕಾರ ನಿಮಗೆ ಎಲ್ಲಿಯವರೆಗೆ ಇದೆ? ನೀವು ವಿರೋಧ ಪಕ್ಷದವರನ್ನು ಕೆಣಕಲಿಕ್ಕೆ ಹೋಗಬಾರದು. ಸಹಕಾರ ಬೇಕು ಎಂದು ಹೇಳಿ ನಿಮ್ಮ ಸರ್ಕಾರ ಇದ್ದಾಗ ಅದು ಮಾಡಲಿಲ್ಲ, ಇದು ಮಾಡಲಿಲ್ಲ ಎಂದು ಹೇಳಿ ಈ ಸದನದ ಹೊರಗಡೆ ಹೇಳಿಕೆ ಕೊಡತಕ್ಕದ್ದು ಸರಿಯಲ್ಲ.

ಅಧ್ಯಕ್ಷರು : ಯಾರೋ ಹೇಳಿಕೆ ಕೊಟ್ಟರೆ ಅವರ ಮೇಲೆ ಏಕೆ ಹೇಳುತ್ತೀರಿ? ಅದನ್ನು ಏಕೆ ಕೋಟ್ ಮಾಡುತ್ತೀರಿ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದಕ್ಕಿಂತ ಮುಖ್ಯವಾಗಿ ನನಗೆ ಏನು ಬೇಕು ಅದನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ವಿರೋಧ ಪಕ್ಷದವರಿಗೆ ನಾವು ಧನ್ಯವಾದಗಳನ್ನು ಹೇಳಿದ್ದೇವೆ.

ಅಧ್ಯಕ್ಷರು : ಈಗ ನಾನು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಪ್ರಶ್ನೋತ್ತರ ತೆಗೆದುಕೊಳ್ಳಿ. ನಿಮಗೆ ಅನುಕೂಲ ಆಗಿದೆ ತೆಗೆದುಕೊಳ್ಳಿ. ಆದರೆ ನೀವು ಕೋಪ ಏಕೆ ಮಾಡಿಕೊಳ್ಳುತ್ತೀರಿ?

ಅಧ್ಯಕ್ಷರು : ಕೋಪದ ಪ್ರಶ್ನೆ ಅಲ್ಲ. ಆದರೆ ತಾವೇನು ಹೇಳಿದಿರಿ? ಒಂದು ನಿಮಿಷ ಸಮಯ ಕೊಡಿ ಎಂದು ಹೇಳಿ 25 ನಿಮಿಷ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಜನ ಎರಡು ವಿಚಾರವನ್ನು ನಿರೀಕ್ಷಣೆ ಮಾಡುತ್ತಾರೆ. ರೈತರ ಬೆಳೆ ಎಲ್ಲಾ ಹಾಳಾಗಿದೆ, ರಾಜ್ ಕುಮಾರ್ ಅವರು ಕಾಡಿನಲ್ಲಿ ಇದ್ದಾರೆ. ಸರ್ಕಾರ ಏನು ಮಾಡುತ್ತಿದೆ ಎಂದು ಕೇಳುತ್ತಾರೆ. ಇದು ನನ್ನ ಪ್ರಿವಿಲೇಜ್.

ಅಧ್ಯಕ್ಷರು : ಉತ್ತರ ಹೇಳಿದ ಮೇಲೆ ಪುನಃ ಏಕೆ ವಿಷಯವನ್ನು ರೈಸ್ ಮಾಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ದಯವಿಟ್ಟು ಕೋಪ ಮಾಡಿಕೊಳ್ಳಬಾರದು.

ಅಧ್ಯಕ್ಷರು : ತಾವು ರೈಸ್ ಮಾಡಿದ್ದೀರಿ ಅವರು ಉತ್ತರ ಹೇಳಿದ್ದಾರೆ, ಇನ್ನು ಮತ್ತೇಕೆ ಚರ್ಚೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೆ ಒಂದು ಕ್ಲಾರಿಫಿಕೇಶನ್ ಕೊಟ್ಟರೆ ಸಾಕು. ನಿಮಗೆ ಕೇಂದ್ರ ಸರ್ಕಾರದಿಂದ ಪತ್ರ ಬಂದಿದೆಯಾ? ನಿಮ್ಮ ಸ್ಟ್ಯಾಟಜಿಯನ್ನು ಬದಲಾವಣೆ ಮಾಡಬೇಕು ಎಂದು ಹೇಳಿ ಕೇಂದ್ರ ಸರ್ಕಾರದಿಂದ ಪತ್ರ ಬಂದಿದೆಯಾ?

ಅಧ್ಯಕ್ಷರು : ಏನಾದರೂ ಮಾಡಿಕೊಳ್ಳಿ ಪ್ರಶ್ನೋತ್ತರ ಓದಿ ಸುಮ್ಮನೇ ಇರುವುದು ಸರಿಯಲ್ಲ. ಶೂನ್ಯ ವೇಳೆಯಲ್ಲಿ ಆದರೂ ರೈಸ್ ಮಾಡಿದ್ದರೆ, ಸರಿ ಇರುತ್ತಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಹೇಳಿಕೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಿಂದ ಪತ್ರ ಬಂದಿದೆಯಾ ಎಂದು ನಾನು ಕೇಳುತ್ತಿದ್ದೇನೆ. ಪತ್ರ ಬಂದಿಲ್ಲ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಹೇಳುತ್ತಾರೆ ಕುಳಿತುಕೊಳ್ಳು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೇಂದ್ರ ಸರ್ಕಾರದಿಂದ ಪತ್ರ ಬಂದಿದೆಯಾ ಎಂದು ಹೇಳಲಿ.

ಶ್ರೀ ಎ. ರಾಮದಾಸ್ : ನಾವು ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಚರ್ಚೆ ಮಾಡಲು ನೋಟೀಸ್ ಕೊಟ್ಟಿದ್ದೇವೆ. ಅಲೋ ಮಾಡುವುದಾದರೆ ಮಾಡಿ. ನಾವು ರೂಲ್ 69ರ ಕೆಳಗಡೆ ಸೂಚನೆ ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು : ನಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಅವರು ಹೇಳಬೇಕು. ಜವಾಬ್ದಾರಿ ಇರತಕ್ಕ ಮಂತ್ರಿಗಳು. ನಿಮಗೆ ಪತ್ರ ಬರೆದಿದ್ದಾರಾ?

ಅಧ್ಯಕ್ಷರು : ಅವರು ವೆರಿಫೈ ಮಾಡಿ ಹೇಳುತ್ತಾರೆ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಹೇಳಬೇಕಲ್ಲ. ನಮಗೆ ಯಾವುದೂ ಪತ್ರ ಬಂದಿಲ್ಲ ಎಂದು ಅದನ್ನಾದರೂ ಹೇಳಬೇಕಲ್ಲ. ನಮಗೆ ಉತ್ತರ ಏನೂ ಬೇಡವಾ ಸ್ವಾಮಿ? ಕೇಂದ್ರ ಸರ್ಕಾರದಿಂದ ಪತ್ರ ಬಂದಿದೆಯಾ?

ಅಧ್ಯಕ್ಷರು : ಅವರು ವೆರಿಫೈ ಮಾಡದೇ ಹೇಗೆ ಹೇಳುವುದಕ್ಕೆ ಆಗುತ್ತದೆ? ಕೊನೆಯ ಪಕ್ಷ ಶೂನ್ಯವೇಳೆಯಲ್ಲಿ ತೆಗೆದುಕೊಂಡಿದ್ದರೆ ಅದು ಬೇರೆ ವಿಷಯ. ಕ್ಷಮಿಸಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಸದಸ್ಯರಿಗೆ ಇನ್ನೂ ವಿವರಣೆ ಕೊಡಲು ಅವಕಾಶ ಕೊಡುತ್ತಿದ್ದೀರಿ. ನಮಗೆ ಅರ್ಥ ಆಗುತ್ತಿಲ್ಲ ಏನು ಮಾಡುತ್ತಿದ್ದೀರಿ ಎಂದು.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮಾನ್ಯ ಪ್ರಕಾಶ್ ಖಂಡ್ರೆಯವರು ಪ್ರಶ್ನೆ ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಶಂಕರಲಿಂಗೇಗೌಡರು ಒಂದು ವಿಚಾರವನ್ನು ಹೇಳಿದ್ದಾರೆ. ಅದು ಕಡತದಲ್ಲಿ ಬರಬಾರದು. ಅವರೇನು ಹೇಳಿದ್ದಾರೆ ಎಂದರೆ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿರತಕ್ಕದ್ದು ಡಾ||ರಾಜ್‌ಕುಮಾರ್ ಬಗ್ಗೆ ಚರ್ಚೆ ಮಾಡತಕ್ಕದ್ದು xxx ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅದು ನಮಗೆ ಕೇಳಿಸಲಿಲ್ಲ, ಅದನ್ನು ಕಡತದಿಂದ ತೆಗೆದು ಹಾಕಿ.

(ಗೊಂದಲ)

ಅಧ್ಯಕ್ಷರು : ನಾನು ನಿಮಗೆ ಅಲೋ ಮಾಡಿದ್ದೇ ತಪ್ಪು. ನಾಲ್ಕೈದು ಜನ ಮಾತನಾಡುತ್ತಿದ್ದಾರೆ ಬರೆದುಕೊಳ್ಳಬೇಡಿ. ಅವರು ಆ ತರಹ ಹೇಳಿದ್ದರೆ ನಾನು ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ಮಾನ್ಯ

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಪ್ರಕಾಶ್ ಖಂಡ್ರೆಯವರು ತಮ್ಮ ಪ್ರಶ್ನೆ ಕೇಳಿ. ನಾನು ಅಲೋ ಮಾಡಿದ್ದೇ ತಪ್ಪಾಯಿತು, ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರ ಹೇಳಿ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು

ಬೀದರ್ ಜಿಲ್ಲೆಯ ಪುರಸಭೆ ಹಾಗೂ ನಗರ ಸಭೆಗಳಿಗೆ ಅನುದಾನ ಬಿಡುಗಡೆ

541 - ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀದರ್ ಜಿಲ್ಲೆಯಲ್ಲಿ ಇರುವ ಪುರಸಭೆಗಳು ಹಾಗೂ ನಗರಸಭೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)*

ಆ) *ಕಳೆದ ಒಂದು ವರ್ಷದಲ್ಲಿ ಜಿಲ್ಲೆಯ ಪುರಸಭೆ ಹಾಗೂ ನಗರಸಭೆಗಳಿಗೆ ಎಷ್ಟು ಅನುದಾನವನ್ನು ಮೀಸಲಾಗಿಡಲಾಗಿತ್ತು? ಇದರ ಪೈಕಿ ಎಷ್ಟು ಅನುದಾನವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ?*

ಇ) *ಈ ಅನುದಾನದಿಂದ ಪುರಸಭೆ ಹಾಗೂ ನಗರಸಭೆಗಳು ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈ ಗೊಂಡಿವೆ (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)*

ಈ) *ಅನುದಾನ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಪುರಸಭೆ ಹಾಗೂ ನಗರಸಭೆಗಳಲ್ಲಿ ಅಭಿವೃದ್ಧಿ ಕಾಮಗಾಠಗಳು ಕುಂಠಿತವಾಗಿರುವುದು ನಿಜವೇ?*

ಉ) *ಹಾಗಿದ್ದಲ್ಲಿ ಸರ್ಕಾರವು ಈ ವಿಷಯದಲ್ಲಿ ಮುಂಬರುವ ವರ್ಷಗಳಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?*

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ)

ನಗರಸಭೆ ಬೀದರ್	1
ಪುರಸಭೆ ಭಾಲ್ಕಿ	1
ಪುರಸಭೆ ಹುಮ್ನಾಬಾದ್	1
ಪುರಸಭೆ ಚಿಟಗುಪ್ಪ	1
ಪುರಸಭೆ ಬಸವಕಲ್ಯಾಣ	1
ಪಟ್ಟಣ ಪಂಚಾಯತ್ ಔರಾದ್	1
ಒಟ್ಟು	**6**

ಆ) 1999-2000ನೇ ಸಾಲಿನಲ್ಲಿ ಪುರಸಭೆ:ನಗರ ಸಭೆಗಳ ಅನುದಾನ ಬಿಡುಗಡೆ ಮಾಡಿದ ವಿವರ :